**ಓಎಸ್ ನಂಃ 54/2021**

**ಡಿಡಬ್ಲೂಃ 1**

**<u>ಸಾಕ್ಷಿಗೆ ದಿನಾಂಕ 05-01-2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಆರ್.ವಿ. ವಕೀಲರಿಂದ</u>

ನಿಮಗೆ 65 ರಿಂದ 66 ವಯಸ್ಸಾಗಿದೆ ಎಂದರೆ ಸರಿ. ನಿಮ್ಮ ಪ್ರಮಾಣ ಪತ್ರದಲ್ಲಿ ನಿಮ್ಮ ವಯಸ್ಸನ್ನು ತಪ್ಪಾಗಿ ನಮೂದು ಮಾಡಿದ್ದೀರಿ ನನಗೆ ಗೊತ್ತಿಲ್ಲ. ನಾನು ವಾಸವಾಗಿರುವ ಮನೆಯ ನಂಬರ್ ನನಗೆ ಗೊತ್ತಿಲ್ಲ ಎಂದರೆ ಸರಿ. ನಿಮ್ಮ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಸಂಗತಿಗಳ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರವನ್ನು ನಾನು ಹೇಳಿದಂತೆ ವಕೀಲರು ತಯಾರಿಸಿರುತ್ತಾರೆ. ನಮ್ಮ ತಂದೆ ತೀರಿಕೊಂಡಾಗ ನನಗೆ 40 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿತ್ತು. ನನಗೆ 4 ಜನ ಅಣ್ಣ ತಮ್ಮಂದಿರು. ಅವರ ಹೆಸರು ದೇವೇಂದ್ರಪ್ಪ, ಈರಪ್ಪ ಮತ್ತು ಮಾದೇವ್ ಆಗಿರುತ್ತದೆ. ಈರಪ್ಪ ತೀರಿಕೊಂಡಿದ್ದು ಅವರಿಗೆ ಮಕ್ಕಳಿಲ್ಲ ಎಂದರೆ ಸರಿ. ನಮ್ಮ ತಂದೆ ಜೀವಂತ ಇದ್ದಾಗ ನಾವು ವಾಸಿಸುತ್ತಿದ್ದ ಮನೆಯ ಮುಖ್ಯ ಬಾಗಿಲು ಪೂರ್ವ ದಿಕ್ಕಿಗಿತ್ತು. ಸದರಿ ಮನೆಗೆ 4 ಕೊಠಡಿಗಳಿದ್ದವು. ನಿಮ್ಮ ತಂದೆ ಜೀವಂತ ಇದ್ದಾಗ ಅಥವಾ ಅವರು ತೀರಿಕೊಂಡ ನಂತರ ನೀವು ಸದರಿ ಮನೆಯ ನಕಾಶೆ ತಯಾರಿಸಿಲ್ಲ ಎಂದರೆ ಸರಿ. ನಮ್ಮ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ನಮ್ಮ ಮನೆ ಈಗಲೂ ಸಹ ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ದಾವಾ ಆಸ್ತಿಯು ವಾದಿಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.